ನೀರು ಬಿಟ್ಟಿಲ್ಲವೆಂದು ತಪ್ಪು ಕಲ್ಪನೆ ಮೇಲೆ, ಈಗಾಗಲೇ ಇಂತಹ ಕೃತ್ಯಕ್ಕೆ ಕೈ ಹಾಕಿರುವುದರಿಂದ, ಮುಂದೆ ಇನ್ನೂ ಎಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬರಬಹುದು? ರಾಜ್ಯ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕು.

(3) ಪತ್ರಿಕೆಗಳಲ್ಲಿ ವಿಗ್ರಹದ ಗಣಪತಿ ಹಾಲು ಕುಡಿದ ಎಂದು ಪ್ರಚಾರವಾಗಿರುವ ಬಗ್ಗೆ.

ಶ್ರೀ ಕೆ. ಶ್ರೀನಿವಾಸಗೌಡ :- ಇವತ್ತು ಎಲ್ಲಾ ಪತ್ರಿಕೆಗಳಲ್ಲಿ ಪ್ರಮುಖವಾಗಿ ಗಣಪತಿ ಹಾಲು ಕುಡಿದ ಎಂದು ಬಂದಿದೆ. ಇವತ್ತು ಇನ್ನು ಐದು ವರ್ಷಗಳಲ್ಲಿ 20 ನೇ ಶತಮಾನವನ್ನು ಬಿಟ್ಟು 21 ನೇ ಶತಮಾನಕ್ಕೆ ಹೋಗುತ್ತಿದ್ದೇವೆ. ಆದರೆ ಇವತ್ತೂ ಕೂಡ ಗಣಪತಿ ಹಾಲು ಕುಡಿಯುತ್ತಾನೆ ಎಂದರೆ ನಾವು ತಲೆತಗ್ಗಿಸಬೇಕಾಗುತ್ತದೆ.

ಉಪಾಧ್ಯಕ್ಷರು :- ಯಾವ ಗಣಪತಿ?

ಶ್ರೀ ಕೆ. ಶ್ರೀನಿವಾಸಗೌಡ :- ಕಲ್ಲುವಿಗ್ರಹ. ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ, ಗಣಪತಿ ಹಾಲು ಕುಡಿಯುತ್ತಾನೆ ಎಂದು. ಡೆಲ್ಲಿಯಲ್ಲಿ, ಇವತ್ತು ಬಿ.ಬಿ.ಸಿಯಲ್ಲೂ ಕೂಡ ಇದರ ಬಗ್ಗೆ ಬಂದಿದೆಯಂದು ಹೇಳುತ್ತಿದ್ದಾರೆ. ಬೆಂಗಳೂರಿನಲ್ಲಿ ಪತ್ರಿಕೆಗಳಲ್ಲಿ ಬಂದಿದೆ. ಕೆಲವು ಐ.ಎ.ಎಸ್. ಅಧಿಕಾರಿಗಳು ನಾವು ಸ್ಟೂನ್‌ನಲ್ಲಿ ಹಾಲು ಕುಡಿಸಿದೆವು ಅದು ಕುಡಿಯಿತು ಎಂದು ಈ ಮಾತನ್ನು ಡೆಲ್ಲಿಯಲ್ಲಿ ಹೇಳಿದ್ದಾರೆ. ಇದೆಲ್ಲಾ ಅವಲೋಕನ ಮಾಡಿದಾಗ, ಇವತ್ತು ನಾವು 21 ನೇ ಶತಮಾನಕ್ಕೆ ಕಾಲಿಡುತ್ತಿದ್ದೇವೆ. ಹಾಗಾದರೆ ಈ ಮುಗ್ಧ ಜನರನ್ನು ನಾವು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ? ಇವತ್ತು ಗಣಪತಿ ಹಾಲು ಕುಡಿದ ಎಂದರೆ, ನಾಳೆ ವಿಸ್ಕಿಯನ್ನೂ ಒಂದು ಸ್ಟೂನ್‌ನಲ್ಲಿ ಕುಡಿಸಿದರೆ ಆತ ಕುಡಿಯಬಹುದಲ್ಲಾ? ನನಗೆ ಕೂಡ ದೇವರ ಮೇಲೆ ನಂಬಿಕೆ ಇದೆ. ದೇವರ ಮೇಲೆ ನಂಬಿಕೆ ಇಲ್ಲವೆಂದು ನಾನು ಹೇಳಲಿಲ್ಲ.

ಶ್ರೀ ಜಿ. ಬಿ. ಶಿವಕುಮಾರ್ :- ಅಧ್ಯಕ್ಷರೇ, ಇವತ್ತು ಹಾಲು ಹಾಕಬಹುದು, ನಾಳೆ ಆಲ್ಕೋಹಾಲ್ ಹಾಕಬಹುದು.

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಇನ್ನೂ ಮುಗಿಸಿಲ್ಲ. ಇವತ್ತು ನಾವು 21 ನೇ ಶತಮಾನಕ್ಕೆ ಹೋಗುವ ಕಾಲದಲ್ಲಿ ಈ ತರಹ ಭ್ರಮೆಗಳನ್ನು ಮುಗ್ಧ ಜನರ ತಲೆಗೆ ಹಾಕುವುದು ಎಂದರೆ ಇದು ಬಹಳ ಅಪಾಯಕರ. ಸರ್ಕಾರ ಇವರ ಮೇಲೆ ಕ್ರಮ ಜರುಗಿಸಬೇಕು. ಅವನು ಯಾರು ಕಲ್ಲು ವಿಗ್ರಹಕ್ಕೆ ಕುಡಿಸುತ್ತಾರೆ, ಅವನು ವಿಸ್ಕಿಯನ್ನು ಕುಡಿಸಲಿ. ಇದನ್ನು ಲಘುವಾಗಿ ತೆಗೆದುಕೊಳ್ಳುವಹಾಗಿಲ್ಲ.

ಈ ವಿಷಯ ಬಹಳ ಗಹನವಾಗಿದೆ. ಇದು ನಮ್ಮ ದೇಶದ ಜನರ ಮುಗ್ಧತೆಯನ್ನು ಎತ್ತಿ ಪ್ರಪಂಚಕ್ಕೆ ತೋರಿಸತಕ್ಕಂಥ ವಿಷಯ. 21 ನೇ ಶತಮಾನಕ್ಕೆ ನಾವು ಹೋಗುವಾಗ ಯಾವುದೋ ಕಲ್ಲುವಿಗ್ರಹಕ್ಕೆ ಸ್ಟೂನ್‌ನಲ್ಲಿ ಹಾಲು ಕುಡಿಸುವುದೆಂದರೆ ಬಕೆಟ್‌ನಲ್ಲಿ ಹಾಲು ಏಕೆ ದೇವರು ಕುಡಿಯುವುದಿಲ್ಲ? ಸ್ಟೂನ್‌ನಲ್ಲೇ ಫೀಡ್ ಮಾಡಬೇಕಾ? ಇದನ್ನು ಎಲ್ಲೆಲ್ಲಿ ಮಾಡಿದ್ದಾರೆ, ಇದರ ಬಗ್ಗೆ ತನಿಖೆ ಮಾಡಬೇಕು. ಸರ್ಕಾರ ಇದರ ಬಗ್ಗೆ ತನಿಖೆ ಮಾಡಿ ಜನಕ್ಕೆ ಹೇಳಬೇಕು.

ಉಪಾಧ್ಯಕ್ಷರು :- ಇದು ಹಿಂದೂಸ್ತಾನ ತುಂಬಾ ನಡೆದಿದೆ. ಸರ್ಕಾರ ಹಿಂದೂಸ್ತಾನ ತುಂಬಾ ತನಿಖೆ ಮಾಡಬೇಕೇನು?

ಶ್ರೀ ಕೆ. ಶ್ರೀನಿವಾಸಗೌಡ :- ಕರ್ನಾಟಕ ಸರ್ಕಾರ ಕರ್ನಾಟಕ ಮಟ್ಟಕ್ಕಾದರೂ ಮಾಡಿ ಇದರ ಬಗ್ಗೆ ಮೊದಲ ಹೆಜ್ಜೆ ಇಡಬೇಕು. ನಮ್ಮ ಸರ್ಕಾರ ಮುಂದೆ ಬಂದು ಇದನ್ನು ತನಿಖೆ ಮಾಡಿ ಇದು ಸುಳ್ಳು ಎಂದು ಜನಕ್ಕೆ ಹೇಳಬೇಕು. ಇಲ್ಲದಿದ್ದರೆ ಸರ್ಕಾರ ಎಡವಿದಹಾಗೆ ಆಗುತ್ತದೆ. ಇವತ್ತು ಪತ್ರಿಕೆಗಳಲ್ಲಿ ಇದರ ಬಗ್ಗೆ ಬಂದಾಗ ನೋಡಿದರೆ ಎಲ್ಲೆಲ್ಲೂ ಜನರ ನೂಕುನುಗ್ಗಲು. ನನ್ನ ಮಗನೂ ಹೇಳಿದ 'ರಾತ್ರಿ ನಾನೂ ಕೂಡ ಹೋಗಿದ್ದೆ ಅಪ್ಪ. ದೇವರ ವಿಗ್ರಹ ಸ್ಕ್ರೀನ್‌ನಲ್ಲಿ ಹಾಲು ಕುಡಿಯುತ್ತಿತ್ತು.' ಎಂದು. ಇದು ನಿಜವಾಗಿಯೂ ಕೆಲವರು ಸುಳ್ಳು ಮಾಹಿತಿಯನ್ನು ಎಬ್ಬಿಸಿ ದೇಶದ, ನಮ್ಮ ರಾಜ್ಯದ ಜನತೆಯನ್ನು ತಪ್ಪುದಾರಿಗೆ ಎಳೆಯತ್ತಿದ್ದಾರೆ.

ಇದರ ವಿರುದ್ಧವಾಗಿ ಸರ್ಕಾರ ಎಚ್ಚೆತ್ತುಕೊಳ್ಳಬೇಕು ; ಜನರಿಗೆ ಹೇಳಬೇಕು. ಇವತ್ತು ನಾವು 21 ನೇ ಶತಮಾನದಲ್ಲಿರುವವರು. ಮನುಷ್ಯರಿಗೇ ಇವತ್ತು ಹಾಲು ಕುಡಿಯುವುದಕ್ಕೆ, ಸಿಗುವುದಿಲ್ಲ. ಇನ್ನು ದೇವರೇ ಹಾಲು ಕುಡಿಯುವುದಕ್ಕೆ ಶುರು ಮಾಡಿದರೆ, ಇನ್ನೆಲ್ಲಿ ಹಾಲು ಸಿಗುತ್ತದೆಂಬ ಮಾತನ್ನು ಈ ಸಭೆಯಲ್ಲಿ ಹೇಳುತ್ತೇನೆ. ಇವತ್ತು ಸರ್ಕಾರ ತೀವ್ರವಾದಂಥ ಕ್ರಮವನ್ನು ಜರುಗಿಸಿ, ನಿಜಾಂಶವನ್ನು ಜನರಿಗೆ ಮನದಟ್ಟಾಗುವಂತೆ ಮಾಡಬೇಕೆಂದು, ತಮ್ಮ ಮೂಲಕ ಅವರನ್ನು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಉಪಾಧ್ಯಕ್ಷರೇ, ಇದು ಧಾರ್ಮಿಕವಾದಂಥ ವಿಚಾರ. ಈ ಧಾರ್ಮಿಕ ವಿಚಾರದಲ್ಲಿ ನಾವು, ಯಾರೂ ಕೈಹಾಕತಕ್ಕಂತಾದ್ದು ಸರಿಯಾದುದಲ್ಲವೆಂದು ನನ್ನ ವೈಯಕ್ತಿಕ ವಿಚಾರ. ಅದರ ಬಗ್ಗೆ, ಯಾರಿಗೆ ನಂಬಿಕೆ ಇದೆಯೋ ಅವರು ನಂಬಿಕೊಳ್ಳಲಿ, ಯಾರಿಗೆ ನಂಬಿಕೆ ಇಲ್ಲ, ಅವರು ನಂಬುವುದು ಬೇಕಾಗಿಲ್ಲ. ಸರ್ಕಾರಕ್ಕೂ ಮತ್ತು ಈ ಧಾರ್ಮಿಕವಾದ ವಿಚಾರಗಳಿಗೂ ಸಂಬಂಧವಿಲ್ಲವೆಂದು ನನ್ನ ವೈಯಕ್ತಿಕ ಅನಿಸಿಕೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ರಾತ್ರಿ ನಮ್ಮ ಸ್ನೇಹಿತರುಗಳೆಲ್ಲಾ ಬಿ.ಬಿ.ಸಿ.ಯಲ್ಲಿ ನೋಡಿದೆವು. ನಮಗೂ ಕೂಡ ಇದೇನು ಎಂದು ಆಶ್ಚರ್ಯವಾಯಿತು. ಬಿ.ಬಿ.ಸಿ.ಯಂಥ ಒಂದು ವರ್ಲ್ಡ್ ಏಜೆನ್ಸಿ, ಅಷ್ಟು ಸುಲಭವಾಗಿ ಬ್ರಾಡ್‌ಕ್ಯಾಸ್ಟ್ ಮಾಡುತ್ತದೆಂದು ಹೇಳಿದರೆ, ಅದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳತಕ್ಕ ವಿಚಾರ ಅಲ್ಲ. ಅದು ಸರಿ ಅಥವಾ ಸರಿಯಲ್ಲವೆನ್ನುವುದು ಬೇರೆ ವಿಚಾರ. ನಾನು ಬೆಳಿಗ್ಗೆ ವೇಳೆಯಲ್ಲಿ ಮನೆಯಲ್ಲಿ ಪೂಜೆ ಮಾಡುತ್ತೇನೆ. ಬೆಳಿಗ್ಗೆ ಗಣಪತಿಗೆ ಹಾಲು ಕುಡಿಸಿದ ಮಕ್ಕಳನ್ನು ಕೇಳಿದೆ. ನನ್ನ ಮಗಳು ಹೇಳಿದರು, ನಿಜ ಡ್ಯಾಡಿ ಎಂದು ಹೇಳಿದಳು. ನಾನು ಬೆಳಿಗ್ಗೆ ಪೂಜೆ ಮಾಡುವ ಸಮಯದಲ್ಲಿ ನಮ್ಮ ಯಾವಗಲ್ ಫೋನ್ ಮಾಡಿದರು. ನಾನು ಪೂಜೆ ಮಾಡಿ ನಂತರ ಫೋನ್ ಮಾಡೋಣವೆಂದು, ಒಂದು ಬೆಳ್ಳಿ ವಿಗ್ರಹ, ಒಂದು ತಾಮ್ರದ ವಿಗ್ರಹ ಎರಡೂ ಮನೆಯಲ್ಲಿದೆ. ಎರಡರ ಕೆಳಗೂ ಒಂದು ಪ್ಲೇಟ್ ಇಟ್ಟು, ನನಗೆ ಮೊದಲು ಮಾನಸಿಕವಾಗಿ ಏನು ಎಂದು ಗೊತ್ತಾಗಲಿಲ್ಲ. ನನ್ನ ಮಗಳು ಬಂದು ಹೇಳಿದಳು. ನೀವು ಹೀಗೆ ಹಿಡಿದುಕೊಳ್ಳಿ, ಹಾಲನ್ನು ಸೇವಿಸುತ್ತದೆಂದು ಹೇಳಿದಳು. ನಾನು ಹಾಗೆಯೇ 5-6 ಸ್ಪೂನನ್ನು ನೋಡಿದೆ; ಅದು ಹಾಲನ್ನು ಕುಡಿಯುತ್ತದೆ. ಅದು ಹೇಗೆ ಕೆಳಗಡೆ ಹೋಗುತ್ತದೆಂದು ನಮಗೆ ಗೊತ್ತಿಲ್ಲ. ಸೈನ್ಸ್ ಏನು, ಅದು ಅದೆಷ್ಟು ನಿಜ, ಸತ್ಯ ಎಂದು ಗೊತ್ತಾಗಲಿಲ್ಲ. ನನಗೆ ನೋಡಿ ತುಂಬಾ ಆಶ್ಚರ್ಯವಾಯಿತು. ಆದ್ದರಿಂದ,

ಆದು ಕುಡಿಯುತ್ತದೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಒಂದು ಧಾರ್ಮಿಕವಾದ ವಿಚಾರವೇನೆಂದರೆ, ಜನರಿಗೆ ಒಂದು ಭಾವನೆ ಆ ಕಡೆ ಬಂದಿರುವಾಗ, ಲಘುವಾಗಿ ತೆಗೆದುಕೊಂಡು ಜನರ ಮನಸ್ಸನ್ನು ಕೆಡಿಸುವುದು ಬೇಡ. ಇದನ್ನು ಅಷ್ಟಕ್ಕೇ ಬಿಟ್ಟು ಬಿಡೋಣ. ಇದನ್ನು ನಂಬುವವರು ನಂಬಿಕೊಳ್ಳಲಿ, ನಂಬದೇ ಇರುವರು ಬಿಟ್ಟು ಬಿಡಲಿ, ಆದು, ಅವರವರ ವೈಯಕ್ತಿಕವಾದಂಥ ವಿಚಾರವೇ ವಿನಹ, ಆ ವಿಚಾರವನ್ನು ಸದನದಲ್ಲಿ ಹೆಚ್ಚಿಗೆ ಪ್ರಸ್ತಾಪ ಮಾಡಿಕೊಂಡು, ಯಾರ ಮನಸ್ಸನ್ನೂ ಕೆಡಿಸುವುದಕ್ಕೆ ಹೋಗದೇ ಇರುವುದು ಸೂಕ್ತ ಎಂದು ನನಗನಿಸುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ :- ಇದು ಯಾರ ಮನಸ್ಸನ್ನೂ ನೋಯಿಸತಕ್ಕ ಪ್ರಶ್ನೆ ಇಲ್ಲ. ನಾನು ನಿನ್ನೆ ಮೂರುವರೆಯಲ್ಲಿ ದಾಂಡೇಲಿಗೆ ದೂರವಾಣಿ ಮಾಡಿದ್ದೆ. ಆಗ ನನ್ನ ಸ್ನೇಹಿತರು, ಇದು ಆಗುತ್ತಾ ಇದೆಯೆಂದು ಹೇಳಿದರು. ಡೆಲ್ಲಿಯಲ್ಲಿ, ಬೆಂಗಳೂರಿನಲ್ಲಿ ಎಂದರು. ಇದು ನನಗೆ ಗೊತ್ತಿರಲಿಲ್ಲ. ನಾನು ಆದನ್ನು ವೆರಿಫೈ ಮಾಡಿದೆ. ಮತ್ತೆ ಅರ್ಧ ಗಂಟೆಯಲ್ಲಿ ನನ್ನ ಹೆಂಡತಿಯಿಂದ ದೂರವಾಣಿ ಬಂತು. ನಾನೂ ಕೂಡ ಆ ರೀತಿ ಮಾಡಿದೆ, ಗಣಪತಿ ಹಾಲೂ ಕುಡಿಯುತ್ತಿದೆ ಎಂದರು. ನಾನು ಮನೆಗೆ ಹೋಗುವುದು ಸ್ವಲ್ಪ ತಡವಾಗುತ್ತದೆ. ಇದು ವಿಶ್ವಾಸದ ಪ್ರಶ್ನೆ ಇದೆ. ಯಾರ ಮನಸ್ಸನ್ನೂ ನೋಯಿಸತಕ್ಕ ಪ್ರಶ್ನೆ ಇಲ್ಲ. ಯಾರು ನಂಬುತ್ತಾರೆ. ಅವರು ನಂಬಲಿ. ಇದರಲ್ಲಿ ಚರ್ಚೆ ಮಾಡುವ ಪ್ರಶ್ನೆ ಇಲ್ಲ.

ಶ್ರೀ ಕೆ. ಎನ್. ನಾಗೇಗೌಡ :- ಇದರ ಬಗ್ಗೆ ಚರ್ಚೆ ಬೇಡ. ಕೆಲವರಿಗೆ ಧಾರ್ಮಿಕವಾದ ವಿಚಾರಗಳಲ್ಲಿ ನಂಬಿಕೆ ಇದೆ, ಕೆಲವರಿಗೆ ನಂಬಿಕೆ ಇಲ್ಲ. ದಯಮಾಡಿ, ಸದನದಲ್ಲಿ ಇದರ ಚರ್ಚೆ ಬೇಡ.

ಶ್ರೀ ಡಿ. ಟಿ. ಜಯಕುಮಾರ್ :- ಚಂದ್ರಸ್ವಾಮಿ ಎಂಬುವರು ಏನು ಹೇಳುತ್ತಾರೆ, ಇದು ನನ್ನ ಪವಾಡದಿಂದ ಆಗಿದೆಯೆಂದು ಹೇಳುತ್ತಾರೆ. ಇದರಲ್ಲೇನಾದರೂ ಸತ್ಯ ಇದೆಯೇ? ಇದೆಲ್ಲಾ ಮೂಢನಂಬಿಕೆ, ಅವರವರಿಗೇ ಬಿಡೋಣ. ಆದರೆ, ಚಂದ್ರಸ್ವಾಮಿ ಹೇಳಿರುವುದು ಸತ್ಯಕ್ಕೆ ದೂರವಾದಂಥ ಮಾತು.

ಶ್ರೀ ಆರ್. ಎಲ್. ಜಾಲಪ್ಪ :- ನಿಜ, ಎಲ್ಲಾ ಪತ್ರಿಕೆಗಳಲ್ಲೂ ಈ ದಿವಸ ವಿಜ್ಞಾನಿಗಳು, ಇದು ಹೇಗೆ ಆಗುತ್ತದೆ ಎಂಬುದನ್ನು ಹೇಳಿದ್ದಾರೆ. ಇನ್ನೊಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ಫೋಟೋ ಕೂಡ ಬಂದಿದೆ. ಅಲ್ಲಿ ಕುಡಿಯುವ ಹಾಲೆಲ್ಲಾ ಗಟಾರಕ್ಕೆ ಹೋಗುತ್ತದೆಂದು ಅಲ್ಲಿ ಬಕೇಟ್ ಇಟ್ಟು, ಹಾಲು ಕಲೆಕ್ಟ್ ಮಾಡಿರುವ ಸುದ್ದಿಯೂ ಬಂದಿದೆ. ವಿಜ್ಞಾನಿಗಳೆಲ್ಲಾ ಇದು ಯಾವರೀತಿ ಆಗುತ್ತದೆಂದು ಹೇಳಿದ್ದಾರೆ. ಅಮೃತಶಿಲೆ ವಿಗ್ರಹದ ಹತ್ತಿರ ಹಾಲು ಹಿಡಿದಾಗ, ಆದು ಮೈಮೇಲೆ ಹೋಗುತ್ತಿದ್ದುದು ಕಾಣಿಸುತ್ತಿರಲಿಲ್ಲ. ಥಿನ್ ಪೇಪರ್ ಬಣ್ಣ ಕಲೆಸಿ, ಆದರ ಮೇಲಿಟ್ಟಾಗ, ಅದು ಹೋಗುವುದನ್ನು ನೋಡಿದ್ದೇನೆ. ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಯಾರು ಯಾರು ಏನೇನು ನಂಬಿಕೊಳ್ಳುತ್ತಾರೋ ನಂಬಿಕೊಳ್ಳಲಿ, ನಾವು ಏಕೆ ಆದರ ಬಗ್ಗೆ ತಲೆಕೆಡಿಸಿಕೊಂಡು ಸದನದ ಸಮಯವನ್ನು ಹಾಳುಮಾಡಬೇಕು. ಇದು ಅವರವರ ನಂಬಿಕೆ. ಏನಾದರೂ ಮಾಡಿಕೊಂಡು ಹೋಗಲಿ. ಮೊದಲೇ ಮೂಢ ನಂಬಿಕೆ ಇರುವ ಜನ. ನಾವು ಇದನ್ನು 24 ಗಂಟೆಯೊಳಗಾಗಿ ತೆಗೆಯುವುದಕ್ಕಾಗುತ್ತದೆಯೇ? ಇದನ್ನೆಲ್ಲಾ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ವಿಜ್ಞಾನಿಗಳು ಹೇಳಿದ ಮೇಲೂ ನಾವು

ನಂಬುವುದಾದರೆ, ನಮ್ಮ ದೇಶಪಾಂಡೆಯಂಥವರು, ನಾಗೇಗೌಡರಂಥವರೂ ನಂಬುವುದಾದರೆ, ಇನ್ನು ನಮ್ಮಲ್ಲಿ ಎಷ್ಟರಮಟ್ಟಿಗೆ ಡೀಪ್ ರೂಟೆಡ್ ಮೂಢನಂಬಿಕೆ ಇದೆಯೆಂದು ಗೊತ್ತಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಚರ್ಚೆ ಮಾಡುವುದು ಬೇಡ, ಮುಂದೆ ಹೋಗೋಣ.

ಶ್ರೀ ಆರ್. ವಿ. ದೇಶಪಾಂಡೆ :- ಇದರಲ್ಲಿ, ಅವರವರ ನಂಬಿಕೆ ಪ್ರಶ್ನೆ ಇದೆ. ಯಾರು ನಂಬುತ್ತಾರೋ ಅವರು ನಂಬಲಿ. ಯಾರು ನಂಬುವುದಿಲ್ಲ, ಅವರು ಬಿಡಲಿ. ಈ ದೇಶದಲ್ಲಿ ವಿಜ್ಞಾನಿಗಳು ಎರಡು ಪರವಾಗಿಯೂ ಹೇಳತಕ್ಕ ಜನ ಇದ್ದಾರೆ. ನಾಳೆ ಮತ್ತೊಂದು ಪೇಪರಿನಲ್ಲಿ ಬರಬಹುದು. ಹಾಗಾಗಿ, ವಿಜ್ಞಾನಿಗಳಾಗಲೀ ಅಥವಾ ಯಾರೇ ಆಗಲೀ,.....

ಶ್ರೀ ಆರ್. ಎಲ್. ಜಾಲಪ್ಪ :- ಅವರು ದಿನ ಬೆಳಿಗ್ಗೆ ಎದ್ದು ವಿಘ್ನೇಶ್ವರನಿಗೆ ಹಾಲು ಕುಡಿಸಿ, ಇಲ್ಲಿಗೆ ಬರಲಿ.

ಶ್ರೀ ನಾಣಯ್ಯ :- ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಈ ವಿಚಾರವನ್ನು ನಾನೂ ದೂರದರ್ಶನದಲ್ಲಿ ನೋಡಿದೆ. ದೂರದರ್ಶನದಲ್ಲಿ ಯಾವುದನ್ನು ತೋರಿಸಿದರು, ಅದನ್ನು ನೋಡಿದೆ. ನೋಡಿದಮೇಲೆ, ಮನಸ್ಸಿನಲ್ಲಿ ಆತುರ ಮತ್ತು ಕುತೂಹಲ ಬಂತು. ಒಳಗಡೆ, ಕಂಚಿನ ಚಿಕ್ಕದಾದಂಥ ಗಣಪತಿಯ ವಿಗ್ರಹ. ಹಾಲನ್ನು ತೆಗೆದುಕೊಂಡು ನಾನೇ ಹೋದರೆ; ಅಲ್ಲಿ ನನ್ನ ಪತ್ನಿಯವರು ಇದ್ದರು. ಗಣಪತಿಗೆ ಸ್ವಲ್ಪ ಹಾಲು ಕೊಡು ಎಂದು ಹೇಳಿದೆ. ಇದು ನಡೆದಾಗ ಸಾಧಾರಣ ಒಂಭತ್ತುಮುಕ್ಕಾಲು ಗಂಟೆ.

ಒಬ್ಬ ಮಾನ್ಯ ಸದಸ್ಯರು :- ಆದು, ಬೇರೆ ಹಾಲು ಕುಡಿಯತಕ್ಕ ಸಮಯವೂ ಆಗಿತ್ತು.....

ಶ್ರೀ ಎಂ. ಸಿ. ನಾಣಯ್ಯ :- ಹೌದು, ನೀವು ಹೇಳುವುದು ಯಾವ ಹಾಲು ಎಂದು ನನಗೆ ಅರ್ಥವಾಯಿತು. ಆ ಹಾಲು ಸೇವನೆ ಮಾಡತಕ್ಕ ಸಮಯವೂ ಕೂಡ ನಿಜ. ಅದಕ್ಕೆ ಮುಚ್ಚುಮರೆ ಹೇಳುವುದಿಲ್ಲ. ಹೋಗಿ ನಾನು ಗಣಪತಿಗೆ ಹಾಲುಕೊಟ್ಟೆ, ಸುಮಾರು ೫ ನಿಮಿಷ ನೋಡಿದೆ. ಯಾವ ಹಾಲನ್ನೂ ಆ ಗಣಪತಿ ಕುಡಿಯಲಿಲ್ಲ. ನಾನು ಸತ್ಯ ಹೇಳುತ್ತೇನೆ, ನನಗೆ ಇದರಲ್ಲಿ ಮುಚ್ಚುಮರೆ ಇಲ್ಲ. ಟಿ.ವಿ.ಯಲ್ಲಿಯೂ ನೋಡಿದೆ, ಮತ್ತು ಇದನ್ನೂ ನೋಡಿದೆ. ಯಾವ ಹಾಲನ್ನೂ ಗಣಪತಿ ಕುಡಿಯಲಿಲ್ಲ. ನಾನು ಅಲ್ಲಿಂದ ಬಂದಮೇಲೆ, ನಿನ್ನೆ ಆದರಲ್ಲಿಯೂ ಟಿ.ವಿ.ಯಲ್ಲಿ ಒಂದನ್ನು ನೋಡಿದೆ. ಚಮ್ಮಾರ ಯಾರಿದ್ದಾನೆ, ಅವನ ಕೈಯಲ್ಲಿ ಕಬ್ಬಿಣದ ಸುತ್ತಿಗೆ ಇರುತ್ತದೆ, ಆದರಲ್ಲಿ ಚಪ್ಪಲಿಯನ್ನು ಹೊಡೆಯುತ್ತಾನೆ: ಆ ಒಂದು ಸುತ್ತಿಗೆಯನ್ನು ಕೂಡ ನಿನ್ನೆ ನೀವು ಟಿ.ವಿ.ಯಲ್ಲಿ ನೋಡಿರಬಹುದು. ಅದಕ್ಕೂ ಕೂಡ ಹೀಗೆ ಮುಟ್ಟಿಸಿದಾಗ, ಅದೂ ಕುಡಿಯಿತು ಎಂದು ನಿನ್ನೆ ಟಿ.ವಿ.ಯಲ್ಲಿ ಬಂತು. ಆ ಸುತ್ತಿಗೆ, ಹಾಲನ್ನು ಮುಟ್ಟಿದಾಗ, ಅದೂ ಕೂಡ ಕುಡಿಯಿತು ಎಂದು ಟಿ.ವಿ.ಯಲ್ಲಿ ಬಂತು. ನಿನ್ನೆ ರಾತ್ರಿ ನನಗೆ ಒಲಿದಿರಲಿಕ್ಕಿಲ್ಲವೆಂದು ಇವತ್ತು ಬೆಳಿಗ್ಗೆ ಪುನಃ ಮಾಡಿದೆ. ನಾನೇನೂ ಬಿಡಲಿಲ್ಲ. ಇವತ್ತು ಬೆಳಿಗ್ಗೆ ಹೋದೆ. ಬೆಳಿಗ್ಗೆಯೂ ಹೋಗಿ, ಬಹಳ ಹೊತ್ತು ನೋಡಿದೆ. ನಿನ್ನೆ ರಾತ್ರಿ ಕತ್ತಲಲ್ಲಿ ಕುಡಿದಿರಲಿಕ್ಕಿಲ್ಲವೆಂದು ಬೆಳಿಗ್ಗೆ ಕುಡಿಯಬಹುದು ಎಂದು ಹೋಗಿ ನೋಡಿದೆ. ಸತ್ಯವಾಗಿ ಹೇಳುತ್ತೇನೆ, ಇದು ಆಗಲಿಲ್ಲ. ಬಹುಶಃ ಗಣಪತಿ ನನಗೇನಾದರೂ ಒಲಿಯಲಿಲ್ಲವೋ, ಆದು ನನಗೆ ಗೊತ್ತಿಲ್ಲ. ಕೆಲವು ಜನರಿಗೆ ಗಣಪತಿ ಒಲಿದಿದೆ, ಆದರಿಂದ ಕುಡಿದಿರಲಿಕ್ಕೂ ಸಾಕು.

ನನಗಂತೂ ಗಣಪತಿ ಒಲಿಯಲಿಲ್ಲ. ಗಣಪತಿ ಯಾರು ಎಂದು ಹೇಳುವ ಬಗ್ಗೆ ಎ. ಎನ್. ಮೂರ್ತಿರಾವ್‌ರವರ "ದೇವರು" ಎಂಬ ಪುಸ್ತಕ ಇದೆಯಲ್ಲಾ, ಅದರಲ್ಲಿ ಗಣಪತಿ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಗಣಪತಿ ಯಾರು, ಹೇಗೆ ಎಂಬ ವ್ಯಾಖ್ಯಾನ ಬಂದಿದೆ. ಅದನ್ನೆಲ್ಲಾ ನಾವು ಓದಿದ್ದೇವೆ. ಆದ್ದರಿಂದ ನನ್ನ ಕಳಕಳಿ ಇಷ್ಟೆ. ಮಾನ್ಯ ನಾಗೇಗೌಡರು ಹೇಳಿದಹಾಗೆ ನಂಬಿಕೆ. ನಂಬಿಕೆ ಇದ್ದವರು ನಂಬಿಕೊಳ್ಳಲಿ, ನಂಬಿಕೆ ಇಲ್ಲದವರು ಬೇಡ. ಆದರೆ, ನಿನ್ನೆಯಿಂದ ಹಾಲಿನ ಕ್ರಯ 8 ರೂಪಾಯಿಯಿಂದ 50-60 ರೂಪಾಯಿಗಳಿಗೆ ಹೋಗಿದೆ. ನಿನ್ನೆ ರಾತ್ರಿ ಯಾವುದೇ ಮಿಲ್ಕ್ ಭೂತ್‌ಗಳಲ್ಲಿ ಹಾಲು ಸಿಗಲಿಲ್ಲ. ಆದ್ದರಿಂದ, ಸರ್ಕಾರ ಈಗ ಮಾಡಬೇಕಾಗಿರುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿರತಕ್ಕ ಜನರಿಗೆ, ಡೈರಿ ಮುಖಾಂತರ ನಂದಿನಿ ಹಾಲನ್ನು ಕೊಡುತ್ತಿದ್ದೇವಲ್ಲಾ, ಆ ನಂದಿನಿ ಹಾಲು ಸಮಯಕ್ಕೆ ಸರಿಯಾಗಿ, ನಿಗದಿತ ಬೆಲೆಗೆ ಸರಿಯಾಗಿ ಸಿಗುವುದಕ್ಕೆ ಸರ್ಕಾರದಿಂದ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ. ಆ ಕೆಲಸವನ್ನು ಮಾಡುತ್ತೇವೆ. ಈ ಗಣಪತಿಗೆ ಹಾಲು ಕುಡಿಸಲಿಕ್ಕೆ ಹೋಗಿ, ಈ ಪಾಪದ ಮಕ್ಕಳಿಗೆ, ಜನರಿಗೆ ಹಾಲು ಇಲ್ಲದ ರೀತಿಯಾದರೆ, ನಾನು ಕುಡಿಯಬೇಕಾದ ಹಾಲನ್ನು ಗಣಪತಿಗೇ ಕುಡಿಸತಕ್ಕ ಪರಿಸ್ಥಿತಿ ನಿರ್ಮಾಣವಾಗತಕ್ಕ ಹಂತಕ್ಕೆ ನಾವು ಬರಬಾರದು ಎಂದು ಹೇಳುತ್ತೇನೆ. ನಾನು ಬೆಳಿಗ್ಗೆ ಕೇಳಿದೆ, ನಂದಿನಿ ಹಾಲಿಗೆ ಎಲ್ಲಾದರೂ ನೂಕುನುಗ್ಗಾಟ ಉಂಟೇ ಎಂದು. ಏನೂ ಕಾಣಲಿಲ್ಲವೆಂದು ಹೇಳಿದರು. ಆದ್ದರಿಂದ, ಇದರ ಬಗ್ಗೆ ಸರ್ಕಾರ ಗಮನಿಸಬೇಕಾಗುತ್ತದೆ, ಈ ಕೆಲಸವನ್ನು ಬಚ್ಚೇಗೌಡರಿಗೆ ಹೇಳಿ, ಹಾಲಿನ ಕೊರತೆಯಾಗದಹಾಗೆ, ನೋಡಿಕೊಳ್ಳತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ.

10.50 ಎ.ಎಂ

ಶ್ರೀ ಜಿ. ವಿ. ರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ ಇಲ್ಲಿ ಮುಖ್ಯವಾಗಿ ಎರಡು ಪ್ರಶ್ನೆ ಇದೆ. ಅವರವರ ಭಾವನೆಗಳನ್ನು ಕೆರಳಿಸಬೇಕು ಎನ್ನುವಂತಹ ಉದ್ದೇಶ ಯಾರಿಗೂ ಇಲ್ಲ. ಇಲ್ಲಿ ಬಹಳ ಮುಖ್ಯವಾದ ಎರಡು ಪ್ರಶ್ನೆಗಳು ಇದೆ. ಮಾನ್ಯ ನಾಣಯ್ಯನವರು ಹೇಳಿದಂತಹ ಒಂದು ಅಂಶವನ್ನು ನಾನು ಒಪ್ಪುತ್ತೇನೆ. ಮೌಢ್ಯದ ಪರಮಾವಧಿಯಲ್ಲಿ ಜನರಿಗೆ ಹಾಲು ಇಲ್ಲದೆ ಮಾಡುವಂತಾದ್ದರ ಬಗೆಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎನ್ನುವಂತಾದ್ದು ಒಂದು ಮುಖ್ಯವಾದ ಪ್ರಶ್ನೆ. ಇಲ್ಲಿ ಇನ್ನೊಂದು ಮುಖ್ಯವಾದ ಪ್ರಶ್ನೆ, ಇಲ್ಲಿ ಯಾರ ಭಾವನೆಗಳನ್ನು ಕೂಡ· ಚರ್ಚೆ ಮಾಡತಕ್ಕಂಥಾದ್ದು ಅಲ್ಲ. ಈಗ ಒಂದು ಸಮೂಹ ಸನ್ನಿ ಸೃಷ್ಟಿಯಾಗಿದೆಯಲ್ಲ ಇದು ಏಕೆ ಆಗಿದೆ ಉತ್ಪತಿ ಎನ್ನುವಂತಾದ್ದು, ಇದರ ಪರಿಣಾಮ ಏನು ಎನ್ನತಕ್ಕಂಥಾದ್ದರ ಬಗ್ಗೆ ಚರ್ಚೆ ಆಗಬೇಕು. ಇಲ್ಲಿ ಭಾವನೆಗಳ ಪ್ರಶ್ನೆ ಅಲ್ಲ. ಏಕೆಂದರೆ ಈ ದೇಶದಲ್ಲಿ ಯಾರ್‍ಯಾರೋ ಸಮೂಹ ಸನ್ನಿಗಳನ್ನು ಹುಟ್ಟಿಹಾಕಿ ಜನರನ್ನು ಅನೇಕ ಸಂದರ್ಭಗಳಲ್ಲಿ ತಪ್ಪು ದಾರಿಗೆ ಎಳೆದುಕೊಂಡು ಹೋಗುವಂತಹ ಪ್ರಜ್ಞಾಪೂರ್ವಕ ಪ್ರಯತ್ನ ನಡೆಯುತ್ತಿದೆ. ಇದರ ಬಗ್ಗೆ ನಾವು ಚರ್ಚೆ ಮಾಡಬೇಕು. ಯಾರ ಭಾವನೆಗಳ ಬಗ್ಗೆ ಕೂಡ ಚರ್ಚೆ ಮಾಡತಕ್ಕಂಥಾದ್ದು ಅಲ್ಲ. ಇದರಲ್ಲಿ ಮೂರನೇ ಅಂಶ ಏನು ಇದೆ ಎಂದು ಹೇಳಿದರೆ ಇಂತಹ ಸುದ್ದಿಯನ್ನು ಪತ್ರಿಕೆಗಳವರು ಪ್ರಮುಖವಾಗಿ ಸುದ್ದಿ ಮಾಡಿದ್ದಾರೆ. ಈ ಒಂದು ವಿಷಯ ಜನರಲ್ಲಿ ಕಾಡುತ್ತಿದೆ. ಇದರಲ್ಲಿ ಇರುವ ನಿಜಾಂಶ ಏನು ಎನ್ನುವುದನ್ನು ನೋಡಬೇಕಾಗಿದೆ. ಹಲವಾರು ವಿಜ್ಞಾನಿಗಳು ಆವರದ್ದೇ ಆದ ಅಭಿಪ್ರಾಯಗಳನ್ನು ಹೇಳಿದ್ದಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಹೇಳಿದರು ವಿಜ್ಞಾನಿಗಳು ಎರಡು ರೀತಿಯಲ್ಲಿ ಹೇಳುವವರು ಇದ್ದಾರೆ ಎಂದು. ವಿಜ್ಞಾನಿಗಳು ಎರಡೂ ರೀತಿಯಲ್ಲಿ

ಹೇಳುತ್ತಾರೆ ಎನ್ನುವಂತಹ ಒಂದು ತೀರ್ಮಾನಕ್ಕೆ ಅವರು ಬಂದರೆ ನಾವು ವಿಜ್ಞಾನವನ್ನು ನಂಬುವುದೇ ಬೇಡ.

ಶ್ರೀ. ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ ನಾನು ವಿಜ್ಞಾನಿಗಳನ್ನು ನಂಬಬೇಡಿ ಅಂತ ಹೇಳಲಿಲ್ಲ. ಈಗ ನಮ್ಮ ಮಾನ್ಯ ಕಾನೂನು ಸಚಿವರು ಹೇಳಿದರು. ಇದು ಅವರ ನಂಬಿಕೆ ಪ್ರಶ್ನೆ ಇದೆ. ನನ್ನ ಅನುಭವ ನಾನು ನೋಡಿದ್ದೇನೆ. ನಾನು ಸಹ ಹಾಲು ಕುಡಿಸಿದ್ದೇನೆ. ಇವತ್ತು ಅವರು ಇಲ್ಲ ಅಂತ ಹೇಳುತ್ತಾರೆ. ಅವರ ಲೆಕ್ಕದಲ್ಲಿ ಅದು ತಪ್ಪು ಇರಬಹುದು, ಆದರೆ ಇಲ್ಲಿ ಪ್ರಶ್ನೆ ಎನಿದೆ ಅಂದರೆ ಇದು ನಂಬಿಕೆ ಪ್ರಶ್ನೆ ಇದೆ. ವಿಜ್ಞಾನಿಗಳು ಎನು ಹೇಳುತ್ತಾರೋ ಅದರ ಮೇಲೆ ನಾವು ಅದನ್ನು ನಂಬಬೇಕಾಗುತ್ತದೆ. ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ. ಅವರವರ ಭಾವನೆಗಳಿಗೆ ಅವರನ್ನು ಬಿಟ್ಟು ಯಾರಿಗೆ ನಂಬಿಕೆ ಇದೆ ಅವರು ನಂಬುತ್ತಾರೆ. ಯಾರಿಗೆ ನಂಬಿಕೆ ಇಲ್ಲವೋ ಅವರು ಬಿಡುತ್ತಾರೆ. ಇಲ್ಲಿ ಗಣೇಶನ ಬಗ್ಗೆ ಹೆಚ್ಚು ಚರ್ಚೆ ಮಾಡುವುದು ಬೇಡ.

ಶ್ರೀ. ಡಿ. ಟಿ. ಜಯಕುಮಾರ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಈ ರೀತಿ ಸ್ಟೇಟ್‌ಮೆಂಟ್ ಮಾಡಬಾರದು. ಎಲ್ಲೋ ಮೋಸ ನಡೆದಿದೆ.

(ಗೊಂದಲ)

ಶ್ರೀ. ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಸರ್ಕಾರದ ಪರವಾಗಿ ಸ್ಟೇಟ್‌ಮೆಂಟ್ ಮಾಡಿಲ್ಲ. ನಾನು ಸರ್ಕಾರದ ಪರವಾಗಿ ಇಲ್ಲಿ ಸ್ಟೇಟ್‌ಮೆಂಟ್ ಮಾಡಲು ನಿಂತಿಲ್ಲ. ಈ ವಿಷಯ ಇಲ್ಲಿ ಏನು ಚರ್ಚೆಗೆ ಬಂದಿದೆ ಅದರ ಬಗ್ಗೆ ನಾನು ಸ್ಟೇಟ್‌ಮೆಂಟ್ ಮಾಡುವುದಕ್ಕೆ ನಿಂತಿಲ್ಲ. ನಾನು ನನ್ನ ಅನುಭವವನ್ನು ಹೇಳಿದ್ದೇನೆ. ನಾನು ಮಂತ್ರಿಯಾಗಿದ್ದರೂ ಸಹ ನನ್ನ ಪರ್ಸನಲ್ ಅಭಿಪ್ರಾಯ ಎಂದು ಒಂದು ಇದೆಯಲ್ಲಾ ಅದನ್ನು ನಾನು ಹೇಳುತ್ತಿದ್ದೇನೆ. ಅದಕ್ಕೆ ನನ್ನ ಸಹೋದ್ಯೋಗಿಗಳು ಬೇಜಾರು ಪಟ್ಟಿಕೊಳ್ಳುವ ಅವಶ್ಯಕತೆ ಇಲ್ಲ.

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಅಧ್ಯಕ್ಷರೇ,

ಶ್ರೀ ಜಿ. ವಿ. ರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸರ್ಕಾರದ ಹೇಳಿಕೆ ಎಂದು ಯಾವುದೂ ಇಲ್ಲ. ಸರ್ಕಾರದ ಹೇಳಿಕೆ ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು ಇಷ್ಟೇ. ಸಮೂಹ ಸನ್ನಿ ಬಗ್ಗೆ ಇಲ್ಲಿ ಚರ್ಚೆ ಆಗಬೇಕು. ಇದರ ಪರಿಣಾಮ ಬಹಳ ಕೆಟ್ಟದಾಗಿ ಆಗುತ್ತದೆ ಎನ್ನತಕ್ಕಂಥಾದ್ದು. ಇನ್ನೊಂದು ಇಲ್ಲಿ ರಾಂಗ್ ಸಿಗ್ನಲ್ಸ್ ಹೋಗುತ್ತದೆ. ಅದನ್ನು ನಾನು ಇಲ್ಲಿ ಚರ್ಚೆ ಮಾಡಬೇಕು ಎಂದು ಹೇಳುತ್ತಾ ಇರತಕ್ಕಂಥಾದ್ದು. ಇದು ಹೇಗೆ ಸೃಷ್ಟಿ ಆಯಿತು ಎಂದು ಪತ್ರಿಕೆಯಲ್ಲಿ ಒಂದು ಸುದ್ದಿ ಇದೆ. ಅದೇನೆಂದರೆ ಇದರಲ್ಲಿ ಚಂದ್ರಸ್ವಾಮಿ ಎನ್ನತಕ್ಕಂಥವನ ಒಂದು ಕೈವಾಡ ಇದೆ ಎನ್ನತಕ್ಕಂಥ ಒಂದು ಗಹನವಾದ ಸುದ್ದಿ ಇದೆ. ಚಂದ್ರಸ್ವಾಮಿದ್ದು ಒಂದು ವಾರದಿಂದ ಪತ್ರಿಕೆಯಲ್ಲಿ ನೋಡುತ್ತಿದ್ದೇವೆ. ಆತನನ್ನು ಇವತ್ತು ಸಿಬಿಐ ನವರು ಪ್ರಶ್ನೆ ಮಾಡುತ್ತಿದ್ದಾರೆ ತನಿಖೆ ಮಾಡುತ್ತಿದ್ದಾರೆ. ಆತನೇ ಇದನ್ನು ಸೃಷ್ಟಿ ಮಾಡಿದ್ದಾನೆ ಎಂದು ಹೇಳಿ. ಮೊಟ್ಟಮೊದಲನೆಯದಾಗಿ ನಾನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುವಂತಾದ್ದು, ಮೊಟ್ಟಮೊದಲಿಗೆ ಗಣಪತಿ ಹಾಲು ಕುಡಿಯುತ್ತಾನೆ

ಎನ್ನತಕ್ಕಂಥ ವಿಷಯವನ್ನು ಸೃಷ್ಟಿ ಮಾಡಿದಂತಹ ಒಬ್ಬ ವ್ಯಕ್ತಿ ಐ.ಎ.ಎಸ್. ಅಧಿಕಾರಿ ಆತ ರೈಲ್ವೆಯಲ್ಲಿ ಕೆಲಸ ಮಾಡುವಂತಹ ಒಬ್ಬ ಮನುಷ್ಯ. ಆತ ನಿಷ್ಣಾವಂತ ಚಂದ್ರಸ್ವಾಮಿಯ ಶಿಷ್ಯ. ಇದು ಬಹಳ ಮುಖ್ಯವಾದ ವಿಷಯ. ಆ ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಚಂದ್ರಸ್ವಾಮಿಯ ಶಿಷ್ಯ ಮೊಟ್ಟಮೊದಲಿಗೆ ಈ ವಿಷಯವನ್ನು ಡೆಲ್ಲಿಯಲ್ಲಿ ಪ್ರಚಾರ ಮಾಡಿರುವಂತಾದ್ದು. ಇದರ ಹಿಂದೆ ಆತನದು ಒಂದು ಗಾಢವಾದಂತಹ ಕುತಂತ್ರ ಇದೆ. ಇವತ್ತು ಇರತಕ್ಕಂಥ ಈ ಒಂದು ಸಂದರ್ಭದಲ್ಲಿ ನಾವು ಅದನ್ನು ಆಲೋಚನೆ ಮಾಡಿದರೆ ಶ್ರೀ ಚಂದ್ರಸ್ವಾಮಿಯ ಕೈವಾಡ ಮತ್ತು ಅವನ ಮೇಲೆ ನಡೆಯುತ್ತಾ ಇರತಕ್ಕಂಥಾ ವಿಚಾರಣೆಯಲ್ಲಿ ಗಾಢವಾದಂತಹ ಮತ್ತು ಗಂಭೀರವಾದಂತಹ ಒಂದು ಹಿನ್ನಲೆಯೂ ಇದೆ. ಏಕೆಂದರೆ ಈ ದೇಶದಲ್ಲಿ ಇಂತಹ ಸಮೂಹ ಸನ್ನಿಗಳನ್ನು ಸೃಷ್ಟಿ ಮಾಡಿರತಕ್ಕಂಥವರಲ್ಲಿ ಇಂತಹ ಜನ ಎಲ್ಲಾ ಇದ್ದಾರೆ. ಅವರ ಸೈನ್ಯ ಭಾರತ ದೇಶದಲ್ಲಿ ಬಹಳ ಇದೆ. ನಾನು ಅವರ ಹೆಸರುಗಳನ್ನು ಇಲ್ಲಿ ಹೇಳುವುದಿಲ್ಲ. ಏಕೆಂದರೆ ಕೆಲವರ ಹೆಸರುಗಳನ್ನು ಹೇಳಿದರೆ ಕೆಲವರಿಗೆಲ್ಲಾ ನೋವಾಗಬಹುದು ಇಲ್ಲಿ. ಆದ್ದರಿಂದ ನಾನು ಯಾರ ಹೆಸರುಗಳನ್ನು ಹೇಳುವುದಿಲ್ಲ. ಈ ಚಂದ್ರಸ್ವಾಮಿಯ ಸಂತತಿ ಏನು ಇದೆ ಈ ಶನಿ ಸಂತಾನ ಆ ಶನಿ ಸಂತಾನವನ್ನು ಇಡೀ ದೇಶದಲ್ಲಿ ಇದೆ ಅದರ ಬಗ್ಗೆ ನಾನು ಚರ್ಚೆ ಆಗಬೇಕೆಂದು ಹೇಳುತ್ತಿದ್ದೇನೆ. ಇದು ಬಹಳ ಗಂಭೀರವಾದಂತಹ ಪ್ರಶ್ನೆ.

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಉಪಾಧ್ಯಕ್ಷರೇ, ಗಣಪತಿ ದೇವರು ವಿಧಾನಸಭೆಯಲ್ಲಿ ಪ್ರವೇಶ ಮಾಡಿ ಜಗಳಕ್ಕೆ ಆಸ್ಪದ ಕೊಟ್ಟರೋ ಏನೋ ಎನ್ನುವಂತಹ ಒಂದು ಭೀತಿ ನನ್ನದು ಇವತ್ತು ನಾವು ಲಕ್ಷಗಟ್ಟಲೆ ಹಣವನ್ನು ಸಾರ್ವಜನಿಕ ಗಣೇಶೋತ್ಸವಕ್ಕೆ ಸುರಿದು ಗಣೇಶನ ಆರಾಧನೆಯನ್ನು ಮಾಡುವಂತಹ ಒಂದು ವಿಜೃಂಭಣೆಯನ್ನು ನಾವು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಿನ್ನೆ ನಡೆದಂತಹ ಘಟನೆ ಎನು ಇದೆ ಇದರಲ್ಲಿ ಸತ್ಯೆ ಅಸತ್ಯೆಗಳ ಅನ್ವೇಷಣೆಯನ್ನು ಮಾಡುವುದಕ್ಕಿಂತಲೂ ಕೂಡ ನಂಬಿಕೆ ಮತ್ತು ಮೂಢನಂಬಿಕೆಗಳ ಬಗ್ಗೆ ನಾವು ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಅನೇಕರು ಮೂಢನಂಬಿಕೆಗಳ ಬಗ್ಗೆ ಹೇಳಿದ್ದು ಇರಬಹುದು. ಮಾನ್ಯ ನಾಣಯ್ಯನವರ ಮನೆಯಲ್ಲಿ ಅವರು ಹಾಲು ಕುಡಿಸಿದ್ದೇನೆ ಎಂದು ಹೇಳಿದರು. ಅದು ನಂಬಿಕೆಯ ಪ್ರಶ್ನೆ ಅಲ್ಲ. ಅದು ನಡೆದಂತಹ ಘಟನೆ ಅದು. ಅವರು ಇವರು ಕೂಡಿ ನಂಬಿಕೊಂಡು ಬಂದಿದ್ದು ಅಲ್ಲ. ಇವರು ಇಲ್ಲಿ ಸ್ಟೂನ್‌ನಲ್ಲಿ ಇಟ್ಟಾಗ ದೇವರು ಹಾಲು ಕುಡಿದಿದೆ. ಇದು ನನ್ನ ಕೊಠಡಿಯಲ್ಲಿರತಕ್ಕಂಥ ನನ್ನ ಒಟ್ಟಿಗೆ ಕೆಲಸ ಮಾಡುವಂತಹ ಒಬ್ಬ ವ್ಯಕ್ತಿ ನನ್ನ ಪಿ. ಎ. ಎಂದು ಯಾರು ಇದ್ದಾರೆ ಅವರ ಮನೆಯಿಂದ ಅವರ ಹೆಂಗಸರು ಫೋನ್ ಮಾಡಿ ಈ ರೀತಿ ಗಣಪತಿ ಹಾಲು ಕುಡಿಯುತ್ತಾರೆ ಎಂದು ಹೇಳಿದರು. ಆಗ ನಾನು ಸಹ ಹೋಗಿ ನೋಡಿದೆ. ಆದ್ದರಿಂದ ಇದು ಮೂಢನಂಬಿಕೆ ಅಲ್ಲ. ಮಾನ್ಯ ನಾಗೇಗೌಡರು ಮೂಢನಂಬಿಕೆಯಿಂದ ಹೇಳಿಲ್ಲ. ಅಲ್ಲಿ ನಡೆದ ಘಟನೆಯನ್ನು ಅವರು ಹೇಳಿದ್ದಾರೆ. ಇದರ ಬಗ್ಗೆ ಇಷ್ಟೊಂದು ಚರ್ಚೆ ಗೊಂದಲಮಯ ಏಕೆ ಮಾಡಬೇಕೋ ನನಗೆ ಗೊತ್ತಾಗಲಿಲ್ಲ. ಇದು ಮೂಢನಂಬಿಕೆ ಇದನ್ನು ನಾವು ನಂಬುವುದಿಲ್ಲ ಎಂದು ಹೇಳುವುದಾದರೆ ಈ ಸಾರ್ವಜನಿಕ ಗಣೇಶೋತ್ಸವವನ್ನು ಎಲ್ಲಾ ನಿಲ್ಲಿಸಿಬಿಡಿ. ಏಕೆ ಇಷ್ಟೊಂದು ಲಕ್ಷಾಂತರ ರೂಪಾಯಿ ವಿರ್ಚುಮಾಡಬೇಕು. ಇವತ್ತು ಗಣಪತಿ ಹಾಲು ಕುಡಿಯುತ್ತಾನೆ ಎಂದು ಹೇಳಿದರೆ ಎಲ್ಲರೂ ಮೂಢನಂಬಿಕೆ ಎಂದು ನಂಬುವುದಾದರೆ ಆ

ಸಾರ್ವಜನಿಕ ಗಣೇಶೋತ್ಸವಕ್ಕೆ ಲಕ್ಷಾಂತರ ರೂಪಾಯಿಗಳು ಸುರಿದು ಮೆರವಣಿಗೆ ಕೊಂಡೋದಯ್ದ.....,

(ಗೊಂದಲ)

+**ಶ್ರೀ ಎಸ್. ರಾಜೇಂದ್ರನ್** :- ಮಾನ್ಯ ಸಭಾಧ್ಯಕ್ಷರೇ It is sentimental and it is purely superstitious. ನಾವೆಲ್ಲ ಮಾನ್ಯ ದೇವೇಗೌಡರ ಸರ್ಕಾರಕ್ಕೆ ಸಪೋರ್ಟ್ ಮಾಡುತ್ತಿದ್ದೇವೆ. ಆದರೆ ಈಗ ಆ ಕಡೆ ಇರುವವರೇ ನಮ್ಮನ್ನು ಈಗ ಬಿಜೆಪಿಗೆ ಸಪೋರ್ಟ್ ಮಾಡುವ ರೀತಿಯಲ್ಲಿ ಸೆಂಟಿಮೆಂಟಲ್ ವ್ಯಾಲ್ಯೂಸ್‌ಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ನಾವು ದೇವೇಗೌಡ ಸರ್ಕಾರಕ್ಕೆ ಸಪೋರ್ಟ್ ಮಾಡುತ್ತಿದ್ದೇವೆ. The BJP will say Ramarajyam, Hindu Rajyam. This is what they are publicising also. ಈಗ ನೀವೂ ಕೂಡ ಸೆಂಟಿಮೆಂಟಲ್ ವ್ಯಾಲೂಸ್‌ಗೆ ನಾವು ಅವರ ಜೊತೆಗೆ ಹೋಗಿ ನಾವು ಸೇರಿಸಿ ಹಿಂದೂ ರಾಜ್ಯಂ ಗಣಪತಿ ರಾಜ್ಯಂ ಅಂದರೆ ಹೇಗೆ? ಸ್ವಾಮಿ, ಗಣಪತಿ ಹಾಲು ಕುಡಿದಿದ್ದಾರೋ ಇಲ್ಲವೋ ಎಂದು ಡೆಮಾನಿಸ್ಟ್ರೇಟ್ ಮಾಡಬೇಕಾದರೆ ಒಂದು ಚಿಕ್ಕಗಣಪತಿಯನ್ನು ಇಲ್ಲಿ ಬಿಟ್ಟು ಡೆಮಾನಿಸ್ಟ್ರೇಟ್ ಮಾಡಬೇಕು. ಹಾಲು ಕುಡಿಸೋಣ ಗಣಪತಿ ಹಾಲು ಕುಡಿಯಿತೋ ಇಲ್ಲವೋ ನೋಡೋಣ. ಏನಾಗುತ್ತದೆ? ಈಗ ಹೇಳುತ್ತಿದ್ದಾರೆ. ಕೆಲವರು ಹಾಲು ಕುಡಿದಿದೆ ಎಂದು ಹೇಳುತ್ತಿದ್ದಾರೆ ಇನ್ನು ಕೆಲವರು ಹಾಲು ಕುಡಿಯಲಿಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

It is purely sentimental value. It is hurting the religious feelings. It is not acceptable. It is purely superstitious belief. It is my feeling. ಈಗ ನಾವು ಇದು ಹಿಂದೂ ರಾಜ್ಯವೇ ಅಥವಾ ಸೆಕ್ಯುಲರಿಸಂ ರಾಜ್ಯವೇ ಎಂಬುದನ್ನು ನೋಡಬೇಕು.

ಉಪಾಧ್ಯಕ್ಷರು :- ಸಾಕು ಕುಳಿತುಕೊಳ್ಳಿ.

ಶ್ರೀ ಕೆ. ಎನ್. ನಾಗೇಗೌಡ :- ಮಾನ್ಯ ಉಪಾಧ್ಯಕ್ಷರೇ, ಅವರು ಒಂದು ಮಾತು ಮಾತನಾಡಿದರು ಅದು ರೇಕಾರ್ಡ್‌ಗೆ ಹೋಗಿದೆ. ನಾವು ಯಾರು ನಂಬಿಕೆ ಇಟ್ಟುಕೊಂಡು ಗಣಪತಿಗೆ ಹಾಲು ಕುಡಿಸಿದ್ದೇವೆ Nothing to encourage BJP. We are not encouraging BJP. He should window that word, ಹಿಂದುತ್ವ ಬಿ.ಜೆ.ಪಿ. ಅಸ್ತಿ ಅಲ್ಲ. ಗಣೇಶ ಬಿ.ಜೆ.ಪಿ. ಅಸ್ತಿ ಅಲ್ಲ. We are 100 % secularistic. We believe in secularism. We believe in our ideology. Therefore it is not the question of supporting the BJP.

ಶ್ರೀಮತಿ ಬಿ. ಟಿ. ಲಲಿತಾನಾಯಕ್ :- ಮಾನ್ಯ ಉಪಾಧ್ಯಕ್ಷರೇ, ನಾನೂ ಕೂಡ ಈ ವಿಷಯದಲ್ಲಿ ಒಂದು ಮಾತು ಹೇಳುವುದೇನೆಂದರೆ ನಾನು ಯಾರ ಮನಸ್ಸಿಗೂ ನೋವು ಕೊಡಬೇಕು ಎಂದು ಅಲ್ಲ ಅಥವಾ ಇದು ಮೂಢನಂಬಿಕೆ ಎಂದು ಕೂಡ ಹೇಳುವುದಿಲ್ಲ. ನಾನು ಒಂದು ವಿಷಯವನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಗಣಪತಿಹಾಲು ಕುಡಿದ ಎನ್ನುವುದಾದರೆ ಕಡಬು ಕೂಡ ತಿನ್ನಬೇಕಾಗುತ್ತದೆ. ಗಣಪತಿ ಯಾರು ಎನ್ನುವುದನ್ನೂ ಕೂಡ

ನಾವು ಸರಿಯಾದ ರೀತಿಯಲ್ಲಿ ಅರ್ಥೈಸಿದರೆ ಗಣಪತಿ ಹಾಲು ಕುಡಿದನೋ ಇಲ್ಲವೋ ಎನ್ನುವುದರ ಬಗ್ಗೆ ನಮಗೆ ಸಂದೇಶ ಇರುವುದಿಲ್ಲ. ಗಣಪತಿ ಎನ್ನುವುದು ಏನು ಅಂದರೆ ಒಂದು ಜ್ಞಾನದ ಸಂಕೇತ. ಆ ಜ್ಞಾನದ ಸಂಕೇತವನ್ನು ನಾವು ಎಕೆ ಹಿಂದುಗಳು ಗಣಪತಿ ಆಕಾರ ಮಾಡಿದ್ದೇವೆ ಅಂದರೆ ಒಂದು ಕಾಳಿನ ಕಣಜ. ಆ ಕಾಳಿನ ಕಣಜದ ಮುಂದೆ ಕುಟ್ಟುವಂಥ ಒಂದು ಒನಕೆ, ಕಾಳನ್ನು ಶುದ್ದಿ ಮಾಡುವುದಕ್ಕೆ ಕಿವಿಗಳ ಆಕಾರದಲ್ಲಿ ಎರಡು ಪೊರೆ, ಆ ಕಾಳಿನ ಕಣಜದಿಂದ ಬಂದಂಥ ಕಾಳನ್ನು ತಿನ್ನುವುದಕ್ಕೆ ಒಂದು ಇಲಿ. ಈ ಕಲ್ಪನೆಯಿಂದ ಗಣಪತಿ, ರೈತನ ಮನೆಯ ಕಣಜದ ಮೂರ್ತಿಯಾಗಿ ನಾವು ಚಿತ್ರೀಕರಣ ಮಾಡಿದ್ದೇವೆ. ಆ ಒಂದು ಕಾಳಿನ ಕಣಜ ಇದ್ದರೆ ಮನಷ್ಯನಿಗೆ ಹೊಟ್ಟೆಗೆ, ಬಟ್ಟೆಗೆ ಎಲ್ಲವೂ ಸಿಗುತ್ತದೆ ಎನ್ನುವ ಕಾರಣದಿಂದ ಆ ದೇವರನ್ನು ಮೂರ್ತಿ ರೂಪದಲ್ಲಿ ನಾವು ಮಾಡಿದ್ದೇವೆ.

ಶ್ರೀ ಯು. ಆರ್. ಸಭಾಪತಿ :- ಇದು ನನಗೆ ಅರ್ಥವಾಗಲಿಲ್ಲ. ಇದು ಒಂದು ದೊಡ್ಡ ಹರಿಕಥೆ ಆಯಿತಲ್ಲಾ ಈಗ.

ಶ್ರೀ ಹೆಚ್. ಶಿವಪ್ಪ :- ಮಾನ್ಯ ಉಪಾಧ್ಯಕ್ಷರೇ, ಈ ಕಾಂಟ್ರವರ್ಸಿ ಸೆಟಲ್ ಆಗಬೇಕಾದರೆ ಗಣಪತಿಯನ್ನು ಈ ಸದನಕ್ಕೆ ತಂದು ಹಾಲು ಕುಡಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ :- ಮಾನ್ಯ ಉಪಾಧ್ಯಕ್ಷರೇ, ಮಂತ್ರಿಗಳು ಮಾತನಾಡುವಾಗ, ಸಭಾಪತಿಯವರು ಹರಿಕಥೆ ಮಾಡುವುದು ಬೇಡ ಎಂದು ಹೇಳಿದರು. ಅವರು ಯಾರಿಗೆ ಬುದ್ಧಿ ಹೇಳುವುದಕ್ಕೆ ಬಂದಿದ್ದಾರೆ ಇಲ್ಲಿ? ಸದನದ ಸಮಯವನ್ನು ಇದರಲ್ಲಿ ವೇಸ್ಟ್ ಮಾಡುವುದು ಬೇಡ.

ಶ್ರೀ ಯು. ಆರ್. ಸಭಾಪತಿ :- ಘಟನೆ ನಡೆದಿರುವ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ಮೂಢನಂಬಿಕೆ ಬಗ್ಗೆ ಮಾತನಾಡುತ್ತಿಲ್ಲ. ಈ ಘಟನೆ ನಡೆದಿದೆ ಎಂದು ನಾವು ಹೇಳುತ್ತೇವೆ, ನೀವು ಒಪ್ಪುತ್ತೀರಾ?

ಉಪಾಧ್ಯಕ್ಷರು :- ಇಲ್ಲಿಗೆ ಇದು ಮುಗಿಯಿತು.

ಪ್ರಕಟಣೆ

ಅಧ್ಯಕ್ಷರು :- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. 'ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 318 ರ ಮೇರೆಗೆ ದಿನಾಂಕ 21 ನೇ ಸೆಪ್ಟಂಬರ್ 1995 ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದಂತೆ ಅನುಮೋದಿಸಿತೆಂದು ತಿಳಿಸುತ್ತೇನೆ. 'ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯ 1995,' 'ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ 1995,' 'ಕರ್ನಾಟಕ ಪೌರ ನಿಯಮಗಳ ಎರಡನೇ (ತಿದ್ದುಪಡಿ) ವಿಧೇಯಕ 1995,' 'ಕರ್ನಾಟಕ ಪೌರ ಸಭೆಗಳ ಎರಡನೇ (ತಿದ್ದುಪಡಿ) ವಿಧೇಯಕ 1995,'